3. ಸದರೀ ಮೇಲ್ಕಂಡ ಬಿಲ್ಲರೆ ಇನಾಂಗಳ ಬಗ್ಯೆ ಮೊದಲೇ ಈ ಆಫಿಸಿನ 1881ನೇ ಇಸವಿ ಅಕ್ಟೋಬರು 28ನೇ ತಾರೀಖಿನ 17ನೇ ನಂಬರು ಮತ್ತು ಡಿಸಂಬರು 13ನೇ ತಾರೀಖಿನ 22ನೇ ನಂಬರು ಇಸ್ತಿಹಾರ್‌ನಾಮೆಗಳ ಪ್ರಕಾರ ಕೊಡಲ್ಪಟ್ಟ ಟೈಟಿಲ್‌ಡೀಡ್ಡು ಗಳು ರದ್ದುಮಾಡಲ್ಪಟ್ಟಿರುತ್ತೆಂದು ಇದರ ದೆಸೆಯಿಂದ ಪ್ರಕಟಿಸಲ್ಪಡುತ್ತೆ.

ಜೆ. ಪಿ. ಗ್ರಾಂಟ್,
ಸೂಪರ್‌ಟೆಂಡೆಂಟ್ ಆಫ್ ಇನಾಂ ಸೆಟ್ಲ್‌ಮೆಂಟ್.

ಬೆಂಗಳೂರು ಡಿಸ್ಟ್ರಿಕ್ಟು.

ಬೆಂಗಳೂರು ಸಬ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಬೆಂಗಳೂರು ತಾ|| ಕೋನಪ್ಪನ ಅಗ್ರಹಾರದಲ್ಲಿ ಇರುವ ಪಿಚ್ಚಗುಂಟ್ಲ ಮುನಿಯಲ್ಲಿಯ ವಿಷಯದಲ್ಲಿ—

ಸ್ಯ 1887ನೇ ಇಸವಿ ದಿವಾಳೀ ಕೇಸ್ ನಂಬರು ಮಿಸಲೇನಿಯಸ್ 766.

ಹುಕ್ಕುಂ.

ಮೇಲ್ಕಂಡ ಮುನಿಯಲ್ಲಿಯು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜ್‌ರಾದ ಮೆ|| ಸಿ. ಕೈಸ್ ಸಾಹೇಬರವರ ರೂಬರೂ ಅರ್ಜಿದಾರಳಾದ ಮುನಿಯಲ್ಲಿನಯನ್ನ ಖುದ್ದಾಗಿಯು ಮತ್ತು ಸದರೀಯವಳ ಲೇಣೇದಾರ್‌ರಾದ ವೆಂಕಟಸುಬ್ಬಯ್ಯ ದಲಿಯಾರ್ರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಮುನಿಯಲ್ಲಿಯು ಹೊಂದುವದಕ್ಕೆ ಹಕ್ಕು ದಾರಳಾಗುವದರ ಮೂಲಕ ದಿವಾಳಿಯಾದವಳಿಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೇ ಇದಕ್ಕೆ ಲಗ್ನತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ವರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

1887ನೇ ಇಸವಿ ನವಂಬರ್ 4ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನೀಲೇ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿರಿಯಬಂದ ಅವರುಗಳ ವಾಸಸ್ಥಳ.	ಜೊತೆಗೂಡಿ ಯಾವಾಗ ದೆಣೇ ಇಂಪುದದ್ದು	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ಟಿಪ್ಪಣಿ
1	ಬೆಂಗಳೂರಲ್ಲಿ ಇರುವ ವೆಂಕಟಸುಬ್ಬಯ್ಯಾರು	68 8 0	..	ಡಿಕ್ರೀ ಬಾಬತು.

ದಿವಾಳಿಯಾದ ಡಿಕ್ರೀ ದೇಣೇದಾರ ಚಿಕ್ಕಬಳ್ಳಾಪುರದಲ್ಲಿರುವ ಜಟ್ಟಿ ಶೇತಮ್ಮನ ವಿಷಯದಲ್ಲಿ—

ಸ್ಯ 1887ನೇ ಇಸವಿ ದಿವಾಳೀ ಕೇಸ್ ನಂ. ಮಿ|| 893.

ಹುಕ್ಕುಂ.

ಮೇಲ್ಕಂಡ ಜಟ್ಟಿ ಶೇತಮ್ಮನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಸಬ್ ಜಡ್ಜ್‌ರಾದ ಮೆ|| ಸಿ. ಕೈಸ್ ಸಾಹೇಬರವರ ರೂಬರೂ ಅರ್ಜೀದಾರಳಾದ ಶೇತಮ್ಮನ್ನ ಖುದ್ದಾಗಿ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ, 1–2ನೇ ಕ್ರಡಿಟರ್‌ಯವರೂ ಹಾಜರಾಗಲಿಲ್ಲಾ

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ತೀರ್ತಮ್ಮನು ಹೊಂದುವದಕ್ಕೆ ಹಕ್ದುದಾರಳಾಗುವದರ ಮೂಲಕ ದಿವಾಳಿಯಾದವಳೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವಳನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇವಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಇವಳ್ ಕರಾರಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವಳನ್ನ ನಿಖಾಲಸ್ ಮಾಡಲಾಗಿರುತ್ತೆಯಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ ೧೮೮೭ನೇ ಇಸವಿ ನವೆಂಬರ್ 11ನೇ ತಾರೀಖಿನಲ್ಲಿ ಈ ಕೋರ್ಟ್ ಮೊಹರ್ ನಮ್ಮ ದಸ್ತಖತ್‌ನೀಲೇ ಕೊಡಲ್ಪಟ್ಟಿತು.

ಸೂಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಬಲಗು.	ಯಾವಾಗ ಬೆಜೋಯಿಸಿಕೊಂಡದ್ದು	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಯೇನಾದರೂ ಇದ್ದರೆ.	ಟಿಪ್ಪಣಿ.
1	ಚಿಕ್ಕಬಳ್ಳಾಪುರದಲ್ಲಿರುವ ವಾಟದ ಹೊಸದೊಡ್ಡಿ ವೆಂಕಟನಾರಾಯಣ ಮೈನರ್ ಗಾರ್ಡಿಯರ್ ನಾರಣಮ್ಮ.	50	..	ಚಿಕ್ಕಬಳ್ಳಾಪುರ ಮುನಸಿಫ್ ಕೋರ್ಟು 1887ನೇ ಇಸವಿ ಸಿವಿಲ್ 71ನೇ ನಂ. ಡಿಕರೀ ಬಾಬತು.	
2	ಚಿಕ್ಕಬಳ್ಳಾಪುರದಲ್ಲಿರುವ ಬಂಡಾರೀ ಮುನಿಯಪ್ಪನ್.	10	..	ಪತ್ರದ ಬಾಬತು 20 ರೂಪಾಯಿ ಪೈಕಿ ವಸೂಲ್ ಜಾತಾ ಬಾಕಿ.	
	ಜುಮ್ಲಾ	60			

ಸಿ. ಕ್ಯೆನ್,
ಸಬ್ ಜಡ್ಜ್.

ಮೈಸೂರು ಸಬ್ ಜಡ್ಜ್‌ರ್‌ಯವರ ಕೋರ್ಟ್‌ನಲ್ಲಿ.

ದಿವಾಳೀಯಾದ ಡಿಕ್ರೀ ದೇಣೇದಾರ ಯಡತೊರೇ ತಾಲ್ಲೂಕು ಕಸಬಾ ಹೋಬಳಿ ಚಂದಗಾಲ್‌ನಲ್ಲಿರುವ ತೊರೇರ ಜಾತಿ ಪುಟ್ಟನಾಯಕನ ಮಗ 1ನೇ ಮಾಯಂಣ 2ನೇ ಪುಟ್ಟಂಣನ ವಿಷಯದಲ್ಲಿ—

ಸ್ ೧೮೮೭ನೇ ಇಸವಿ ದಿವಾಳೀ ಕೇಸ್ ನಂಬರ್ 229.

ಹುಕ್ಕುಂ.

ಮೇಲ್ಕಂಡ 1ನೇ ಮಾಯಂಣ 2ನೇ ಪುಟ್ಟಣ್ಣ ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜೀದಾರನಾದ 1—2ನೇಯವರ ಪರವಾಗಿ ಅಡ್ವೊಕೇಟ್ ಮೆ|| ಕೃಷ್ಣರಾಯರನ್ನೂ ಮತ್ತು ಸದರೀಯವನ ಲೇಣೇದಾರ್‌ರಾದ 1ನೇ ನರಸುಹ್ಯಯ್ಯ, 2ನೇ ಗಂಗಯ್ಯ, 3ನೇ ವೆಂಕಟಕೃಷ್ಣಯ್ಯಂಗಾರ್ರು, 4ನೇ ಗವಳಯ್ಯ, 6ನೇ ತಿಪ್ಪಾ, 7ನೇ ಆದಮ್‌ಸಾಬಿ ಯವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರು ತಮಗೆ ಈ ದರ್ಯಾಫ್ತ್ ನೋಟೀಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ— 5ನೇ ಗುಂಡೂರಾಯ ಖುದ್ದು ಹಾಜರ್.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ 1ನೇ ಮಾಯಂಣ 2ನೇ ಪುಟ್ಟಂಣ ಯಿವರು ಹೊಂದುವದಕ್ಕೆ ಹಕ್ದುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವರ